**Signature and Name of Invigilator**

1. (Signature) __________________________

   (Name) ____________________________

2. (Signature) __________________________

   (Name) ____________________________

OMR Sheet No. : ........................................

(To be filled by the Candidate)

Roll No. | | | | | | | | |

(In figures as per admission card)

Roll No.______________________________

(In words)

**D-2109**

**Test Booklet No.**

Time : **1 $^{1}/_{4}$** hours]

# PAPER-II
# KANNADA

[Maximum Marks : **100**

Number of Pages in this Booklet : **16**

Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the Test Booklet Number should be entered in the OMR Sheet and the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example :** (A) (B) ⬤ (D)
   where (C) is the correct response.
5. Your responses to the items are to be indicated in the **Answer Sheet given inside the Paper I Booklet only.** If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your name or put any mark on any part of the test booklet, except for the space allotted for the relevant entries, which may disclose your identity, you will render yourself liable to disqualification.
9. You have to return the test question booklet and OMR Answer sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **Negative Marking :- For each incorrect answer, 0.5 marks shall be deducted.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद प्रश्न-पुस्तिका की क्रम संख्या OMR पत्रक पर अंकित करें और OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है ।
   **उदाहरण :** (A) (B) ⬤ (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये उत्तर-पत्रक पर ही** अंकित करने हैं । यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप उत्तर-पुस्तिका पर अपना नाम या ऐसा कोई भी निशान जिससे आपकी पहचान हो सके, किसी भी भाग पर दर्शाते या अंकित करते हैं तो परीक्षा के लिये अयोग्य घोषित कर दिये जायेंगे ।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें ।
10. **केवल नीले/काले बाल प्वाईंट पैन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **नेगेटिव अंक प्रणाली : प्रत्येक गलत उत्तर के लिए 0.5 अंक काटे जाएँगे ।**

## KANNADA
## Paper-II

**Note :** This paper contains **fifty (50)** objectives type questions, each question carrying **two (2)** marks. Attempt all the questions.

**ಸೂಚನೆ :** ಈ ಪತ್ರಿಕೆಯಲ್ಲಿ ಬಹುಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿ.

ಏಕ ಆಯ್ಕೆ ಮಾದರಿಯ ಪ್ರಶ್ನೆಗಳು

1. 'ಬಾಳ್ಗಳ್ಚು' ಗೌರವಕ್ಕೆ ಪಾತ್ರನಾದವನು

   (A) ಕಾಕುಸ್ಥವರ್ಮ (B) ಪಶುಪತಿ

   (C) ವಿಜಾರಸ (D) ಅಳುಕದಂಬ

2. ಇದು ಸಾಂಗತ್ಯರೂಪದ ಕೃತಿ

   (A) ಮೋಹನ ತರಂಗಿಣಿ

   (B) ಶಬರಶಂಕರ ವಿಳಾಸ

   (C) ಧರ್ಮಾಮೃತ

   (D) ಗಿರಿಜಾಕಲ್ಯಾಣ

3. ಪಂಪನ ಆದಿಪುರಾಣ ಕೃತಿಯ ಆಕರ ಗ್ರಂಥ

   (A) ಶಾಂತಿ ಪುರಾಣ (B) ಅಜಿತ ಪುರಾಣ

   (C) ವ್ಯಾಸ ಭಾರತ (D) ಪೂರ್ವ ಪುರಾಣ

4. ಹೊಯ್ಸಳರ ಒಂದನೆಯ ಬಲ್ಲಾಳನ ಆಶ್ರಯದಲ್ಲಿದ್ದ ಕವಿ

   (A) ಒಂದನೆಯ ನಾಗವರ್ಮ

   (B) ನಾಗಚಂದ್ರ

   (C) ದುರ್ಗಸಿಂಹ

   (D) ನಯಸೇನ

5. 'ಪಉಮ ಚರಿಯ' ಕೃತಿಯಿಂದ ಪ್ರೇರಣೆಗೊಂಡ ಕಾವ್ಯ

   (A) ರಾಮಚಂದ್ರ ಚರಿತ ಪುರಾಣ

   (B) ಚಾವುಂಡರಾಯ ಪುರಾಣ

   (C) ನೇಮಿನಾಥ ಪುರಾಣ

   (D) ಲೀಲಾವತಿ ಪ್ರಬಂಧ

6. 'ಕಪಿಲ ಸಿದ್ಧ ಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನ ರಚನೆ ಮಾಡಿದವರು

(A) ಅಕ್ಕಮಹಾದೇವಿ

(B) ಅಂಬಿಗರ ಚೌಡಯ್ಯ

(C) ಸಿದ್ಧರಾಮ

(D) ಚೆನ್ನಬಸವಣ್ಣ

7. 'ಕೈವಲ್ಯ ಪದ್ಧತಿ' ಕೃತಿಯನ್ನು ರಚಿಸಿದವರು

(A) ಲಕ್ಕಣ್ಣ ದಂಡೇಶ

(B) ನಿಜಗುಣ ಶಿವಯೋಗಿ

(C) ವಿರೂಪಾಕ್ಷ ಪಂಡಿತ

(D) ಗುಬ್ಬಿ ಮಲ್ಲಣಾರ್ಯ

8. ರತ್ನಾಕರವರ್ಣಿ ಜೀವಿಸಿದ್ದ ಕಾಲ

(A) ಹದಿನಾಲ್ಕನೆಯ ಶತಮಾನ

(B) ಹದಿಮೂರನೆಯ ಶತಮಾನ

(C) ಹನ್ನೆರಡನೆಯ ಶತಮಾನ

(D) ಹದಿನಾರನೆಯ ಶತಮಾನ

9. ಚಾರಿತ್ರಿಕ ವಸ್ತುವನ್ನು ಕಾವ್ಯರಚನೆಗೆ ಬಳಸಿಕೊಂಡ ಕವಿ

(A) ದುರ್ಗಸಿಂಹ (B) ಬ್ರಹ್ಮಶಿವ

(C) ನಂಜುಂಡ (D) ಸಂಚಿ ಹೊನ್ನಮ್ಮ

10. ಕನ್ನಡದ ಮೊತ್ತಮೊದಲ ನಾಟಕ

(A) ಮಿತ್ರವಿಂದಾಗೋವಿಂದ

(B) ವಿಗಡ ವಿಕ್ರಮರಾಯ

(C) ಕೇಳು ಜನಮೇಜಯ

(D) ಕರ್ನಾಟಕ ಅಭಿಜ್ಞಾನಶಾಕುಂತಲ

11. ಇದೊಂದು ಅಚ್ಚಗನ್ನಡ ಪದ

(A) ಚಂದ್ರ (B) ಅಲಮಾರು

(C) ಕಾಗದ (D) ತಿಂಗಳು

12. ಅನ್ಯ ಪದದ ಅರ್ಥವು ಪ್ರಧಾನವಾಗಿರುವ ಸಮಾಸ

(A) ಅರಿ ಸಮಾಸ

(B) ಬಹುವ್ರೀಹಿ ಸಮಾಸ

(C) ಗಮಕ ಸಮಾಸ

(D) ತತ್ಪುರುಷ ಸಮಾಸ

13. 'ರಮಣೀಯಾರ್ಥ ಪ್ರತಿಪಾದಕ: ಶಬ್ದ: ಕಾವ್ಯಂ' ಎಂದು ಹೇಳಿದವನು

(A) ಭಾಮಹ (B) ಭರತ

(C) ಜಗನ್ನಾಥ ಪಂಡಿತ (D) ವಾಮನ

14. 'ಕಾವ್ಯಾದರ್ಶ' ಎಂಬ ಅಲಂಕಾರ ಗ್ರಂಥದ ಕರ್ತೃ

(A) ದಂಡಿ (B) ಉದ್ಭಟ

(C) ಅಪ್ಪಯ್ಯ ದೀಕ್ಷಿತ (D) ರುದ್ರಟ

15. 'ಓರಿಯಂಟಾಲಿಸಂ' ಎಂಬ ಕೃತಿಯ ಕರ್ತೃ

(A) ಟಿ.ಎಸ್. ಇಲಿಯಟ್

(B) ರೇಮಂಡ್ ವಿಲಿಯಮ್ಸ್

(C) ಎಫ್.ಆರ್. ಲೀವೀಸ್

(D) ಎಡ್ವರ್ಡ್ ಸಯಿದ್

16. 'ಸಬ್ಲೈಮ್' ತತ್ವದ ಪ್ರತಿಪಾದಕ

(A) ಷೆಲ್ಲಿ (B) ಕ್ರೋಚೆ

(C) ಲಾಂಜಿನಸ್ (D) ಎಜ್ರಾ ಪೌಂಡ್

17. ಇದು ಪು.ತಿ. ನ. ಅವರ ಭಾವಗೀತೆಗಳ ಸಂಕಲನ

(A) ಅಹಲ್ಯೆ (B) ಹಣತೆ

(C) ಕಾವ್ಯಕುತೂಹಲ (D) ಈಚಲು ಮರದ ಕೆಳಗೆ

18. 'ಮೃತ್ಯುಂಜಯ' ಕಾದಂಬರಿಯ ಕರ್ತೃ

(A) ನಿರಂಜನ (B) ಬಸವರಾಜ ಕಟ್ಟೀಮನಿ

(C) ಎಸ್. ಎಲ್. ಭೈರಪ್ಪ (D) ಅ. ನ. ಕೃ

19. 'ಚಿಂತಾಮಣಿಯಲ್ಲಿ ಕಂಡ ಮುಖ' ಕವನ ಸಂಕಲನದ ಕರ್ತೃ

(A) ವಿ. ಕೃ. ಗೋಕಾಕ

(B) ಶಾಂತಿನಾಥ ದೇಸಾಯಿ

(C) ಪಿ. ಲಂಕೇಶ್

(D) ಗೋಪಾಲಕೃಷ್ಣ ಅಡಿಗ

20. ವಚನ ಚಳುವಳಿಯ ಪ್ರೇರಣೆ ಪಡೆದ ನಾಟಕ

(A) ಸಿರಿಸಂಪಿಗೆ

(B) ಹರಿಜನ್ವಾರ

(C) ಮಹಾಚೈತ್ರ

(D) ಬಿರುದಂತೆಂಬರ ಗಂಡ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು**

21. ಇವರು ಸಾಂಗತ್ಯ ಕೃತಿಗಳನ್ನು ರಚಿಸಿದವರು

(i) ನಿಜಗುಣ ಶಿವಯೋಗಿ ಮತ್ತು ಸಂಚಿ ಹೊನ್ನಮ್ಮ

(ii) ರತ್ನಾಕರ ವರ್ಣಿ ಮತ್ತು ಹರಿಹರ

(iii) ಕನಕದಾಸ ಮತ್ತು ನಂಜುಂಡ

(iv) ದೇಪರಾಜ ಮತ್ತು ಚಾಮರಸ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iii) (B) (i) ಮತ್ತು (iii)

(C) (iii) ಮತ್ತು (iv) (D) (iv) ಮತ್ತು (ii)

22. ಇವು ಅರ್ಥಾಲಂಕಾರಗಳು

(i) ದೃಷ್ಟಾಂತ ಮತ್ತು ಯಮಕ

(ii) ಯಮಕ ಮತ್ತು ಅನುಪ್ರಾಸ

(iii) ರೂಪಕ ಮತ್ತು ದೀಪಕ

(iv) ಉತ್ಪ್ರೇಕ್ಷೆ ಮತ್ತು ಉಪಮಾ

ಇವುಗಳಲ್ಲಿ ಸರಿಯಾದ ಉತ್ತರ :

(A) (iii) ಮತ್ತು (iv) (B) (i) ಮತ್ತು (iii)

(C) (iv) ಮತ್ತು (ii) (D) (ii) ಮತ್ತು (iii)

23. ಕನ್ನಡದಲ್ಲಿರುವ ಅಲಂಕಾರ ಶಾಸ್ತ್ರ ಗ್ರಂಥಗಳು

(i) ಶೃಂಗಾರ ರತ್ನಾಕರ ಮತ್ತು ಅಪ್ರತಿಮವೀರ ಚರಿತೆ

(ii) ಉದಯಾದಿತ್ಯಾಲಂಕಾರ ಮತ್ತು ಛಂದೋಂಬುಧಿ

(iii) ರಸರತ್ನಾಕರ ಮತ್ತು ಶಬ್ದಮಣಿದರ್ಪಣ

(iv) ಕಾವ್ಯಾವಲೋಕನ ಮತ್ತು ಶೃಂಗಾರರತ್ನಾಕರ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iii) (B) (iii) ಮತ್ತು (iv)

(C) (i) ಮತ್ತು (ii) (D) (i) ಮತ್ತು (iv)

24. ಇವು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು

(i) ಭವ್ಯತೆ (ii) ಕಾವ್ಯಪ್ರತಿಮೆ

(iii) ಗುಣೀಭೂತ ವ್ಯಂಗ್ಯ (iv) ರೀತಿ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii) (B) (ii) ಮತ್ತು (iii)

(C) (i) ಮತ್ತು (ii) (D) (iii) ಮತ್ತು (iv)

25. ಇವು ಚಾರಿತ್ರಿಕ ಕಾದಂಬರಿಗಳು

(i) ಭಾರತೀಪುರ (ii) ದುರ್ಗಾಸ್ತಮಾನ

(iii) ಚಿಕವೀರರಾಜೇಂದ್ರ (iv) ಮಹಾಕ್ಷತ್ರಿಯ

ಇವುಗಳಲ್ಲಿ ಸರಿಯಾದ ಉತ್ತರ :

(A) (ii) ಮತ್ತು (iii) (B) (i) ಮತ್ತು (ii)

(C) (iii) ಮತ್ತು (iv) (D) (ii) ಮತ್ತು (iv)

26. ಇವು ಕೈಲಾಸಂ ಅವರ ನಾಟಕಗಳು

(i) ಅಮ್ಮಾವ್ರ ಗಂಡ (ii) ಟೊಳ್ಳು - ಗಟ್ಟಿ

(iii) ಸಂಜೀವಿನಿ ಸಾವಿತ್ರಿ (iv) ಏಕಲವ್ಯ

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv) (B) (i) ಮತ್ತು (ii)

(C) (i) ಮತ್ತು (iii) (D) (ii) ಮತ್ತು (iv)

27. ಇವು ಲಂಕೇಶರ ಕವಿತೆಗಳು

(i) ಮುಂಬೈ ಜಾತಕ (ii) ಅವ್ವ

(iii) ತಾಯಿ (iv) ಬಿಚ್ಚು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (ii) (B) (ii) ಮತ್ತು (iii)

(C) (iii) ಮತ್ತು (iv) (D) (ii) ಮತ್ತು (iv)

28. ಇವು ಪೂರ್ವದ ಹಳಗನ್ನಡದ ರೂಪಗಳು

(i) ನಾಡುಳ್ (ii) ಬಿಟ್ಟರ್

(iii) ಬೆಟ್ಟದೊಳ್ (iv) ಸಂದಾನ್

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv) (B) (ii) ಮತ್ತು (iv)

(C) (i) ಮತ್ತು (iii) (D) (iii) ಮತ್ತು (iv)

29. ಇವು ಮಧ್ಯಮ ಪುರುಷ ಸರ್ವನಾಮಗಳು

(i) ನೀನು (ii) ನಾವು

(iii) ನೀವು (iv) ಅವರು

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iv) (B) (ii) ಮತ್ತು (iii)

(C) (i) ಮತ್ತು (iii) (D) (ii) ಮತ್ತು (iv)

30. ಇವು ದೇಶೀಯ ವರ್ಣಗಳು

(i) ಶ, ಷ (ii) ಯ, ರ

(iii) ಎ. ಒ (iv) ಱ, ೞ

ಇವುಗಳಲ್ಲಿ ಸರಿಯಾದ ಉತ್ತರ :

(A) (iii) ಮತ್ತು (iv) (B) (i) ಮತ್ತು (iii)

(C) (ii) ಮತ್ತು (iii) (D) (i) ಮತ್ತು (iv)

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ**

ಈ ಕೆಳಗಿನ ಲೇಖನ ಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನಗಳಿಗೆ ಉತ್ತರಿಸಿರಿ. ಉತ್ತರದ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿ.

"ಕಲೆ ಎನ್ನುವುದು ಆರಂಭವಾದ ಹೊತ್ತಿನಲ್ಲೆ ಅದನ್ನು ಸವಿದ ರಸಿಕತೆಯೂ ಅದರ ಒಂದು ವಿಮರ್ಶೆಯೂ ಆರಂಭವಾದವು ... ಕಲೆ ಬೆಳೆದ ಹಾಗೆ ವಿಮರ್ಶೆಯೂ ಬೆಳೆದು ಬಂದಿದೆ." ವಿಮರ್ಶೆ ಎನ್ನುವುದು ವಿವಿಧಾನುಭವದ ಸ್ತರಗಳಿಂದ ಕೂಡಿದ ಸಾಹಿತ್ಯದ ಅಧ್ಯಯನದ ಪರಿಣಾಮ. ಸಾಹಿತ್ಯಾಸ್ವಾದನದಲ್ಲಿ ಒದಗಿದ ರಸಾನುಭವದ ಸ್ತರಗಳನ್ನು, ಗುಣ-ದೋಷಗಳನ್ನು ಕುರಿತು ನಡೆಸುವ ವಿವೇಚನೆಯಿಂದಲೆ ಒದಗಿದ ಸಮಸ್ಯೆಗಳಿಗೆ ಕಂಡುಕೊಂಡ ಉತ್ತರದಿಂದಲೆ, ವಿಮರ್ಶೆಯ ಹಲವು ಸೂತ್ರಗಳು ವಿಮರ್ಶಕನಿಗೆ ಗೋಚರವಾಗುತ್ತದೆ. ಆದಕಾರಣ ನಾವು ವಿಮರ್ಶೆಯ ತತ್ವಗಳು ಎಂದು ಯಾವುವನ್ನು ಕರೆಯುತ್ತೇವೆಯೋ ಅವು ವಿಶೇಷ ಸಾಹಿತ್ಯಾಸ್ವಾದನದ ಪರಿಣಾಮದಿಂದ ಮೂಡಿದುವಲ್ಲದೆ ಸಾಹಿತ್ಯದ ಮಾಪನಕ್ಕೆ ಬಹಿರಂಗದಿಂದ ತಂದವಲ್ಲ. ಕಾಲದಿಂದ ಕಾಲಕ್ಕೆ ಸಾಹಿತ್ಯವನ್ನು ಕುರಿತ ಓದುಗನ ಅನುಭವ ವಿಸ್ತರಿಸಿದಂತೆ, ವಿವೇಚನೆ ವಿಶ್ಲೇಷಣೆ ಇವುಗಳ ಕ್ರಮ ಬದಲಾಯಿಸಿದಂತೆ, ವಿಮರ್ಶೆಯ ತತ್ವಗಳೂ ಬದಲಾಯಿಸುತ್ತವೆ. ಕಾವ್ಯವನ್ನು ಕುರಿತು, ಕವಿಕ್ರಿಯೆಯನ್ನು ಕುರಿತು ಅಂದಂದಿನ ಕಾಲಕ್ಕೆ ಇದ್ದ ಮೂಲಭೂತವಾದ ತಿಳಿವಳಿಕೆಯ ಪ್ರಭಾವ ಮತ್ತು ಪರಿಣಾಮಗಳಿಂದ ಅಂದಂದಿನ ವಿಮರ್ಶೆಯ ಶಕ್ತಿಯೂ ಮಿತಗೊಳಿಸಲ್ಪಟ್ಟಿರುವುದುಂಟು. ಪಾಶ್ಚಾತ್ಯ ವಿಮರ್ಶೆಯ ಇತಿಹಾಸವನ್ನು ಗಮನಿಸಿದರೆ, ಯಾವುದನ್ನು Imagination ಎಂದು ಕರೆಯುತ್ತೇವೆಯೋ ಅಂಥ ಒಂದು ಸೃಷ್ಟಿಶೀಲವಾದ ಶಕ್ತಿ ಕವಿಗೆ ಉಂಟೆನ್ನುವ ವಿಚಾರವೇ ಹದಿನೇಳನೇ ಶತಮಾನದ ತನಕ ಖಚಿತವಾಗಿರಲಿಲ್ಲ. ಅರಿಸ್ಟಾಟಲಿನ ಕಾಲದಿಂದ 17 ನೇ ಶತಮಾನದ ತನಕ ಕವಿ ಏನಿದ್ದರೂ imitator, ಅನುಕರಣಶೀಲ ಎಂಬ ಭಾವನೆಯೇ ಪ್ರಧಾನವಾಗಿತ್ತು. ಕವಿ ಏನಿದ್ದರೂ ಚೆನ್ನಾಗಿ ಅನುಕರಿಸಬಲ್ಲನೇ ಹೊರತು ಆತ ಹೊಸತೊಂದನ್ನು ಸೃಜಿಸಬಲ್ಲ ಎನ್ನುವ ಒಂದು ಭಾವನೆಗೆ ಬಲವಿಲ್ಲದುದಕ್ಕೆ ಮುಖ್ಯ ಕಾರಣ, ಅಂದಿನ ತತ್ವಶಾಸ್ತ್ರದಲ್ಲಿ ಮಾನವ ಮನಸ್ಸು ಏನನ್ನಾದರೂ ಸೃಜಿಸಲು ಸಾಧ್ಯವಿಲ್ಲ, ಅದು ಸುಮ್ಮನೆ ಏನನ್ನಾದರೂ ಗ್ರಹಿಸಬಲ್ಲದು ಎನ್ನುವ ಸಿದ್ಧಾಂತ ಪ್ರಬಲವಾಗಿದ್ದುದು. 18ನೆ ಶತಮಾನದ ಹೊತ್ತಿಗೆ ಈ ಭಾವನೆಗಳೆಲ್ಲಾ ತಲೆಕೆಳಗಾದುವು. ಕಾವ್ಯ ಎನ್ನುವುದು ಕೇವಲ ಭಾಷೆಯಲ್ಲಿ ನಡೆದ ಅನುಕರಣವಲ್ಲ, ಅದೊಂದು ಕಲ್ಪನಾಸೃಷ್ಟಿ ಎನ್ನುವ ಸಿದ್ಧಾಂತ ರೂಪಿತವಾಯಿತು. ಅಲ್ಲಿಂದ ಮುಂದೆ ವಿಮರ್ಶೆಯ ದೃಷ್ಟಿಯೇ ಬದಲಾಯಿಸಿತು. ಇಪ್ಪತ್ತನೆಯ ಶತಮಾನದಲ್ಲಿ ಮನಸ್‌ಶಾಸ್ತ್ರದ ಪ್ರಯೋಗ ಪರಿಶೀಲನೆಗಳ ಪ್ರಭಾವ, ಕವಿಜೀವನದ ವಿವರಗಳು, ಕವಿ

ಮನೋಮಂದಿರದ ಪರಿಶೀಲನೆ ಇವುಗಳು ವಿಮರ್ಶೆಯ ಕ್ಷೇತ್ರವನ್ನೇ ವಿಸ್ತರಿಸಿವೆ. ಭಾರತೀಯ ಕಾವ್ಯ ಮೀಮಾಂಸೆಯಲ್ಲಿಯೂ ಸಹ ನಾಟ್ಯದಲ್ಲಿ ರಸಕ್ಕೆ ಇರುವ ಪ್ರಾಧಾನ್ಯತೆ ಕಾವ್ಯದಲ್ಲೂ ಉಂಟೆಂಬ ಸಿದ್ಧಾಂತ ಅಂಗೀಕೃತವಾಗುವ ತನಕ, ಅಲಂಕಾರ ಪ್ರಸ್ಥಾನದಿಂದ ಧ್ವನಿ ಸಿದ್ಧಾಂತದ ತನಕ, ಕಾವ್ಯದ ಜೀವಾಳ ಯಾವುದು ಎನ್ನುವ ಬಗೆಗೆ ವ್ಯಕ್ತವಾಗಿರುವ ಅಲಂಕಾರಿಕರ ಮತಗಳು ಅಂದಂದಿನ ಕಾವ್ಯ ವಿಮರ್ಶೆಯ ಬೆಳವಣಿಗೆಯನ್ನು ಸೂಚಿಸುತ್ತವೆ. ಕಾವ್ಯವನ್ನು ಕುರಿತ ಸಿದ್ಧಾಂತಗಳು ಬೆಳೆದಂತೆ, ವ್ಯತ್ಯಸ್ತವಾದಂತೆ, ವಿಸ್ತರಿಸಿದಂತೆ, ಕಾವ್ಯವನ್ನು ಕುರಿತ ವಿಮರ್ಶೆಯ ತತ್ವಗಳೂ ಕಾಲದಿಂದ ಕಾಲಕ್ಕೆ ಬೆಳೆದಿವೆ, ಪುನರ್ ನಿರ್ಮಾಣಗೊಂಡಿವೆ, ಮಾರ್ಪಾಡು ಹೊಂದಿವೆ. ವಿಚಾರ ಶಕ್ತಿಯ ಸಾಧನ ಸಾಮಗ್ರಿಗಳು ಹೆಚ್ಚಿದಂತೆ ವಿಚಾರದ ರೀತಿಯಲ್ಲಿಯೂ ಗಮನಾರ್ಹವಾದ ಮಾರ್ಪಾಡುಗಳಾಗುವುದು ಸಹಜವೆ.

ವಿಮರ್ಶೆಯ ಇತಿಹಾಸ ಹೀಗಿರುವಾಗ ಸ್ಪಷ್ಟವಾಗುತ್ತದೆ – ವಿಮರ್ಶೆಗೆ ಇಂಥದೇ ಎಂಬ ಖಚಿತವಾದ ನಿಯಮಗಳನ್ನು ಹೇಳಲು ಬರುವುದಿಲ್ಲ ಎಂಬುದು. ಆದರೆ ವಿಮರ್ಶಕನಾದವನು ಅಲ್ಲಲ್ಲಿಗೆ ಉಚಿತವಾಗುವಂಥ, ಅನ್ವಯವಾಗುವಂಥ ಕೆಲವು ನಿಯಮಗಳನ್ನು ಕಂಡುಕೊಳ್ಳಬೇಕು. ಡಾಕ್ಟರ್ ಜಾನ್‌ಸನ್ ಮೂರು ಬಗೆಯ ವಿಮರ್ಶಕರನ್ನು ಗುರುತಿಸುತ್ತಾನೆ : "ಕೆಲವರಿದ್ದಾರೆ, ಅವರಿಗೆ ವಿಮರ್ಶೆಯ ಯಾವ ನಿಯಮಗಳೂ ಗೊತ್ತಿಲ್ಲ. ಆದರೆ ತಮ್ಮ ಸಹಜವಾದ ಅಭಿರುಚಿಯಿಂದ ಆಸ್ವಾದಿಸಿ ಕೃತಿಯನ್ನು ಕುರಿತು ತೀರ್ಪು ಹೇಳುತ್ತಾರೆ. ಇವರು ಮೊದಲನೆಯವರು. ಮತ್ತೆ ಕೆಲವರಿದ್ದಾರೆ. ಅವರು ವಿಮರ್ಶೆಯ ನಿಯಮಗಳನ್ನು ಬಲ್ಲವರು. ಅವರು ಆ ನಿಯಮಗಳಿಂದಲೇ ಕೃತಿಯ ಬೆಲೆಯನ್ನು ನಿರ್ಣಯಿಸತಕ್ಕವರು ; ಇವರು ಎರಡನೆಯವರು. ಬೇರೆ ಕೆಲವರಿದ್ದಾರೆ. ಅವರು ವಿಮರ್ಶೆಯ ನಿಯಮಗಳನ್ನು ಬಲ್ಲವರು. ಆದರೂ ಅವರು ನಿಯಮಾತೀತರು. ಈ ಮೂರು ದರ್ಜೆಯ ತೀರ್ಪುಗಾರರಲ್ಲಿ ಲೇಖಕರು ಒಪ್ಪಿಸಬೇಕಾದದ್ದು ಈ ಮೂರನೆಯವರನ್ನು ; ಅದನ್ನು ಬಿಟ್ಟರೆ ಮೊದಲನೆಯವರನ್ನು ; ಆದರೆ ಎರಡನೆಯವರಿದ್ದಾರಲ್ಲ ಅವರನ್ನು ಲೆಕ್ಕಕ್ಕೇ ಇಟ್ಟುಕೊಳ್ಳ ಬೇಡಿ."

ಜಾನ್ಸನ್‌ನ ಈ ಹೇಳಿಕೆ, ಮೂರು ಬಗೆಯ ವಿಮರ್ಶಕರನ್ನು ಬಹು ಸ್ವಾರಸ್ಯವಾಗಿ ವರ್ಣಿಸುತ್ತದೆ. ಯಾವ ನಿಯಮಗಳನ್ನೂ ತಿಳಿಯದ ಕೇವಲ ಸಹಜಾಭಿರುಚಿಯಿಂದ ಕೃತಿಯ ಬೆಲೆಯನ್ನು ಕಟ್ಟುವ ವಿಮರ್ಶೆ ಎಷ್ಟೋ ಸಲ ಮುಗ್ಧವೂ, ಪ್ರಾಮಾಣಿಕವೂ, ಸಮರ್ಪಕವೂ, ಆಗಿರುವುದುಂಟು. ಇದರ ಜೊತೆಗೆ ಹಿಂದೆ ಪ್ರಚಲಿತವಾಗಿದ್ದ ಸಪ್ರಮಾಣ (inductive) ವಿಮರ್ಶೆ ಮತ್ತು ನಿರ್ಣಾಯಕ ವಿಮರ್ಶೆ (Judicial criticism) ಎಂಬ ಎರಡು ವಿಧಾನಗಳನ್ನು ಹೆಸರಿಸಬಹುದು. ಸಪ್ರಮಾಣ ವಿಮರ್ಶೆ ಎಂದರೆ, ನಿರ್ದಿಷ್ಟವಾದ ಕೆಲವು ನಿದರ್ಶನಗಳಿಂದ ಸಾಮಾನ್ಯ ಸೂತ್ರಗಳನ್ನು ಕಂಡುಕೊಳ್ಳುವ ಬಗೆ. ಎಂದರೆ ಈ ಬಗೆಯ ವಿಮರ್ಶಕ, ಕೃತಿಯ ಅವಲೋಕನಕ್ಕೆ ಪೂರ್ವಭಾವಿಯಾಗಿ, ಸಿದ್ಧವಾದ ಕೆಲವು ನಿಯಮಗಳಿವೆ ಎಂಬುದನ್ನು ಒಪ್ಪುವುದಿಲ್ಲ. ಕೃತಿಯನ್ನು ನೇರವಾಗಿ ವಿಜ್ಞಾನಿ ಪ್ರಕೃತಿಯನ್ನು ಹೇಗೋ ಹಾಗೆ ಅವಲೋಕಿಸಿ ಯಾವ ನಿಯಮಗಳಿಗೆ ಅನುಸಾರವಾಗಿ ಆ ಕೃತಿ ಕಲಾವಿದನ ಪ್ರತಿಭೆಯಿಂದ ರಚಿತವಾಗಿರುವುದೋ ಆ ನಿಯಮಗಳನ್ನು ಕಂಡುಕೊಳ್ಳುತ್ತಾನೆ. ಅದರೆ ನಿರ್ಣಾಯಕ ವಿಮರ್ಶಕ ಕೃತಿಯ ಅವಲೋಕನಕ್ಕೆ ಕೆಲವು ನಿರ್ದಿಷ್ಟ ನಿಯಮಗಳನ್ನಿ ರಿಸಿಕೊಂಡು ಹೊರಡುತ್ತಾನೆ. ಲೋಕದಲ್ಲಿ ಒಬ್ಬ ವ್ಯಕ್ತಿ ಹೇಗೆ ಸರ್ಕಾರದ, ಸಮಾಜದ, ಧರ್ಮದ ಕೆಲವು ನಿಯಮಗಳಿಂದ ಬದ್ಧನೋ ಹಾಗೆಯೆ ಕೃತಿಯೂ ಕೆಲವು ಬಹಿರಂಗದ ನಿಯಮಗಳಿಂದ ಬದ್ಧವಾಗಿರಬೇಕು ಎಂದು ಭಾವಿಸುವವನು. ಈ ವಿಮರ್ಶಕನ ಗಮನ ಆಧಾರ ಕಲ್ಪನೆಗಳ ಮೇಲೆ.

ಜಾನ್‌ಸನ್ ಹೇಳಿದ ಎರಡನೆಯ ದರ್ಜೆಯ ವಿಮರ್ಶಕರ ಗುಂಪಿಗೆ ಇವರನ್ನು ಸೇರಿಸಬಹುದು. "ತಮಗೆ ಆಧಾರವಾಗಿ ದೊರೆತ ಕೆಲವು ನಿಯಮಗಳಿಗೆ ಅಥವಾ ತಮಗೆ ರುಚಿಸಿದ ಕೆಲವು ಸಿದ್ಧಾಂತಗಳಿಗೆ ಅನುಸಾರವಾಗಿ ಕವಿಗಳನ್ನೂ ಕೃತಿಗಳನ್ನೂ ವಿಂಗಡಿಸುವ ಒಂದು ರೂಕ್ಷ ವಿಧಾನ ಇದು." ಜಾನ್ಸನ್ ಹೇಳಿದ ಮೂರನೆ ವರ್ಗದವರು, ನಿಜವಾಗಿಯೂ ಗೌರವಾರ್ಹರು.

31. ಈ ಲೇಖನ ಭಾಗದಲ್ಲಿ ಲೇಖಕರ ಪ್ರಧಾನ ಆಶಯ

(A) ಕೃತಿ ವಿಮರ್ಶೆ
(B) ಕೃತಿ ಪ್ರಶಂಸೆ
(C) ಕೃತಿ ವ್ಯಾಖ್ಯಾನ
(D) ಕೃತಿ ವಿವರಣೆ

32. ಸಾಹಿತ್ಯ ವಿಮರ್ಶೆಯ ತತ್ವಗಳು ರೂಪಗೊಳ್ಳಲು

(A) ಸಾಹಿತ್ಯದ ಪುಸ್ತಕವನ್ನು ಕೊಂಡುಕೊಳ್ಳಬೇಕು
(B) ಸಾಹಿತ್ಯಾಸ್ವಾದನೆಯಾಗಬೇಕು
(C) ಸಾಹಿತ್ಯವನ್ನು ಕಂಠ ಪಾಠ ಮಾಡಬೇಕು
(D) ಸಾಹಿತ್ಯಿಕ ಭಾಷಣಗಳನ್ನು ಕೇಳಬೇಕು

33. ಭಾರತೀಯ ಕಾವ್ಯ ಮೀಮಾಂಸೆಯಲ್ಲಿ

(i) ನಾಟ್ಯದಲ್ಲಿ ರಸಕ್ಕೆ ಪ್ರಾಧಾನ್ಯತೆ ಇದೆ
(ii) ಕಾವ್ಯದಲ್ಲಿ ರಸಕ್ಕೆ ಪ್ರಾಧಾನ್ಯತೆ ಇದೆ
(iii) ಚಂಪೂ ಕಾವ್ಯಕ್ಕೆ ಸ್ಥಾನವಿದೆ.
(iv) ಭಕ್ತಿರಸಕ್ಕೆ ಸ್ಥಾನವಿದೆ.

ಇವುಗಳಲ್ಲಿ ಸರಿಯಾದ ಉತ್ತರ :

(A) (i) ಮತ್ತು (iii)
(B) (i) ಮತ್ತು (ii)
(C) (ii) ಮತ್ತು (iv)
(D) (ii) ಮತ್ತು (iii)

34. ಜಾನ್ಸನ್ ಮಾನ್ಯ ಮಾಡದ ವಿಮರ್ಶಕರ ಲಕ್ಷಣ

(A) ವಿಮರ್ಶೆಯ ಚೌಕಟ್ಟಿನಲ್ಲಿ ಮಾತ್ರ ನಿಂತು ಕೃತಿಯನ್ನು ವಿಮರ್ಶಿಸುವುದು.
(B) ವಿಮರ್ಶೆಯ ನಿಯಮಗಳನ್ನು ತಿಳಿಯದಿದ್ದರೂ ಕೃತಿಯ ಆಸ್ವಾದನೆ ಮಾಡುವುದು.
(C) ವಿಮರ್ಶೆಯ ನಿಯಮಗಳನ್ನರಿತು ಅದನ್ನು ಮೀರುವವರು.
(D) ಪ್ರಾಚೀನ ವಿಮರ್ಶನಗಳನ್ನು ನಿರ್ಲಕ್ಷಿಸುವುದು.

35. ವಿಮರ್ಶೆಯ ತತ್ವಗಳು

(i) ಒಂದು ಕಲ್ಪನಾ ಸೃಷ್ಟಿ

(ii) ಭಾಷೆಯಲ್ಲಿ ನಡೆಯುವ ಒಂದು ಬಗೆಯ ಅನುಕರಣೆ

(iii) ಕಾಲಕಾಲಕ್ಕೆ ಮಾರ್ಪಾಡಾಗುತ್ತವೆ.

(iv) ಶತಮಾನದಿಂದ ಶತಮಾನಕ್ಕೆ ಬೆಳೆಯುತ್ತವೆ.

ಇವುಗಳಲ್ಲಿ ಸರಿಯಾದ ಉತ್ತರ :

(A) (iii) ಮತ್ತು (iv)

(B) (ii) ಮತ್ತು (iii)

(C) (i) ಮತ್ತು (ii)

(D) (i) ಮತ್ತು (iv)

**ಹೇಳಿಕೆ – ವಿವರಣೆ ಆಧಾರಿತ ಬಹುಆಯ್ಕೆ ಮಾದರಿ**

36. **ಹೇಳಿಕೆ** : ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು.

**ವಿವರಣೆ** : ಕ್ಲಿಷ್ಟವಾದ ಕೆಲಸವನ್ನು ಮಾಡಲಾಗದವನಿಗೆ ಸುಲಭವಾದ ಕೆಲಸವನ್ನು ಕೊಟ್ಟಂತಾಯಿತು.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

(B) ಹೇಳಿಕೆ ಸರಿ, ವಿವರಣೆಯೂ ಸರಿ

(C) ಹೇಳಿಕೆ ಸರಿ, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

37. **ಹೇಳಿಕೆ** : ಬೊಮ್ಮವನು ಅರಿದಿಹರೆ ಸುಮ್ಮನಿದ್ದಿರಬೇಕು ಬೊಮ್ಮವನು ಅರಿತು ಉಸುರಿದರೆ ಕಳ ಹೋಗಿ ಕೆಮ್ಮಿದಂತಕ್ಕು

**ವಿವರಣೆ** : ಪರಾತ್ಪರ ವಸ್ತುವನ್ನು ಪ್ರತ್ಯಕ್ಷೀಕರಿಸಿಕೊಂಡವರು ತಮ್ಮ ಸಾಧನೆಯನ್ನು ಲೋಕಕ್ಕೆ ತಿಳಿಸಬಾರದು. ಇಂತಹ ಸಾಧನೆಯ ವಿಚಾರವನ್ನು ಬಹಿರಂಗಗೊಳಿಸಿದರೆ ಚೋರನು ಆಕಸ್ಮಿಕವಾಗಿ ಕೆಮ್ಮಿ ಸಿಕ್ಕಿ ಹಾಕಿಕೊಂಡಂತಾಗುತ್ತದೆ.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆಯೂ ಸರಿ.

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

38. **ಹೇಳಿಕೆ** : ಅರಸಿಕರ ಮುಂದೆ ಕವಿತೆಯನೊಪ್ಪಿಸುವುದೊಂದ ಬರೆಯದಿರು ಬರೆಯದಿರು ಬರೆಯದಿರು ಶಿರದಿ

**ವಿವರಣೆ :** ಸಾಹಿತ್ಯದಲ್ಲಿ ಆಸಕ್ತಿ ಇಲ್ಲದವರಿಗೆ ಸಾಹಿತ್ಯಬೋಧೆ ಮಾಡುವುದು ಮಾತ್ರ ಸಹಿಸಲಸಾಧ್ಯವಾದ ಶಿಕ್ಷೆ ಎನಿಸುತ್ತದೆ.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆಯೂ ಸರಿ

39. **ಹೇಳಿಕೆ** : ಹೊಸ ಹೊಸ ಭಾವಗಳನ್ನು ಸತತವಾಗಿ ಕಾಣುವ, ಕಟ್ಟುವ, ಕೂಡಲೆ ಕಳೆದುಕೊಳ್ಳುವ ಪ್ರಜ್ಞೆಯೇ ಪ್ರತಿಭೆ.

**ವಿವರಣೆ :** ಕವಿಯಾಗಬೇಕಾದವನಿಗೆ ನೂತನ ನೂತನ ಭಾವಗಳು, ವಿಚಾರಧಾರೆಗಳು ಸ್ಫುರಣೆಗೊಳ್ಳ--ಬೇಕೆಂದೇನಿಲ್ಲ.

ಇವುಗಳಲ್ಲಿ ಸರಿಯಾದ ಉತ್ತರ :

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ತಪ್ಪು, ವಿವರಣೆಯೂ ತಪ್ಪು

(C) ಹೇಳಿಕೆ ಸರಿ, ವಿವರಣೆಯೂ ಸರಿ

(D) ಹೇಳಿಕೆ ತಪ್ಪು, ವಿವರಣೆ ಸರಿ

40. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಗೋವಿಂದ ಪೈ - ಗೊಲ್ಗೊಥಾ

(B) ಪುತಿನ - ಪಕ್ಷಿಕಾಶಿ

(C) ಎಸ್. ಎಲ್. ಭೈರಪ್ಪ - ಅನ್ನ

(D) ಶ್ರೀರಂಗ - ಸಾಯೋ ಆಟ

41. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಪುರಂದರದಾಸರು - ಮಾನವ ಜನ್ಮ ದೊಡ್ಡದು

(B) ಕನಕದಾಸರು - ಕುಲಕುಲ ಕುಲವೆಂದು ಹೊಡೆದಾಡದಿರಿ

(C) ವಿಜಯದಾಸರು - ಅಂತರಂಗದ ಕದವು ತೆರೆಯಿತಿಂದು

(D) ಶ್ರೀಪಾದರಾಯರು - ಜಾಲಿಯ ಮರದಂತೆ ದುರ್ಜನರು

42. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ಕೇಶಿರಾಜ - ಭಾಷಾಭೂಷಣ

(B) ನಾಗವರ್ಮ-I - ಛಂದೋಂಬುಧಿ

(C) ಶ್ರೀವಿಜಯ - ಕಾವ್ಯಾವಲೋಕನ

(D) ಭಟ್ಟಾಕಳಂಕ - ಶಬ್ದಮಣಿ ದರ್ಪಣ

43. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುವುದಿಲ್ಲ ?

(A) ಕುರ್ತಕೋಟಿ - ಉರಿಯ ನಾಲಗೆ

(B) ರೇಮಂಡ್ ವಿಲಿಯಮ್ಸ್ - ಸೆಲೆಕ್ಟೆಡ್ ಪ್ರೋಸ್

(C) ಜಿ. ಎಚ್. ನಾಯಕ - ನಿಜದನಿ

(D) ಜಿ. ಎಸ್. ಆಮೂರ - ಭುವನದ ಭಾಗ್ಯ

44. ಕೆಳಗಿನ ಜೋಡಿಗಳಲ್ಲಿ ಯಾವುದು ಹೊಂದಿಕೆಯಾಗುತ್ತದೆ ?

(A) ದ್ವಂದ್ವ ಸಮಾಸ - ಅಣ್ಣತಂಗಿಯರು

(B) ದ್ವಿಗು ಸಮಾಸ - ಮುಂದಲೆ

(C) ಅಂಶ ಸಮಾಸ - ಬಳೆದೊಟ್ಟಂ

(D) ಕ್ರಿಯಾ ಸಮಾಸ - ಮುಮ್ಮಡಿ

45. **ಬಹುಆಯ್ಕೆಯ ಜೋಡಣೆ**

(a) ಜನ್ನ (i) ಸಮಯ ಪರೀಕ್ಷೆ

(b) ಬ್ರಹ್ಮಶಿವ (ii) ಅನಂತನಾಥ ಪುರಾಣ

(c) ಲಕ್ಕಣ್ಣ ದಂಡೇಶ (iii) ಲೀಲಾವತೀ ಪ್ರಬಂಧಂ

(d) ದೇವಚಂದ್ರ (iv) ಶಿವತತ್ವ ಚಿಂತಾಮಣಿ

(v) ರಾಜಾವಳಿ ಕಥೆ

| | (a) | (b) | (c) | (d) |
|---|---|---|---|---|
| (A) | (ii) | (iii) | (i) | (iv) |
| (B) | (i) | (iv) | (ii) | (iii) |
| (C) | (ii) | (i) | (iv) | (v) |
| (D) | (iii) | (ii) | (v) | (iv) |

46. **ಬಹುಆಯ್ಕೆಯ ಜೋಡಣೆ**

| | | | |
|---|---|---|---|
| (a) | ನಾ. ಕಸ್ತೂರಿ | (i) | ಭಾಷಾವಿಜ್ಞಾನದ ಮೂಲತತ್ವಗಳು |
| (b) | ಸಿಂಪಿ ಲಿಂಗಣ್ಣ | (ii) | ವಿಮರ್ಶೆಯ ಪೂರ್ವಪಶ್ಚಿಮ |
| (c) | ಎಂ. ಚಿದಾನಂದ ಮೂರ್ತಿ | (iii) | ಉತ್ತರ ಕರ್ನಾಟಕದ ಜಾನಪದ ಹಾಡುಗಳು |
| (d) | ಜಿ. ಎಸ್. ಶಿವರುದ್ರಪ್ಪ | (iv) | ಮಾರ್ಗ - ೧ |
| | | (v) | ಗಗ್ಗಯ್ಯನ ಗಡಿಬಿಡಿ |

| | (a) | (b) | (c) | (d) |
|---|---|---|---|---|
| (A) | (i) | (iv) | (v) | (iii) |
| (B) | (ii) | (v) | (iii) | (iv) |
| (C) | (iii) | (ii) | (iv) | (i) |
| (D) | (v) | (iii) | (i) | (ii) |

47. **ಬಹುಆಯ್ಕೆಯ ಜೋಡಣೆ**

| | | | |
|---|---|---|---|
| (a) | ರೀತಿ | (i) | ಆನಂದವರ್ಧನ |
| (b) | ರಸ | (ii) | ಕ್ಷೇಮೇಂದ್ರ |
| (c) | ಧ್ವನಿ | (iii) | ವಾಮನ |
| (d) | ಔಚಿತ್ಯ ವಿಚಾರಚರ್ಚೆ | (iv) | ವಿಶ್ವನಾಥ |
| (e) | ಅಲಂಕಾರ | | |

| | (a) | (b) | (c) | (d) | (e) |
|---|---|---|---|---|---|
| (A) | (i) | (ii) | – | (iii) | (iv) |
| (B) | (iii) | (iv) | (i) | (ii) | – |
| (C) | (ii) | (v) | (i) | – | (iii) |
| (D) | (iv) | – | (iii) | (i) | (ii) |

**ಅನುಕ್ರಮ ಮಾದರಿ :** ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

48. (A) ತೀನಂಶ್ರೀ, ಗೋವಿಂದ ಪೈ, ಆರ್. ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ

(B) ಆರ್. ಸಿ. ಹಿರೇಮಠ, ತೀನಂಶ್ರೀ, ಗೋವಿಂದ ಪೈ, ಎಂ.ಎಂ. ಕಲಬುರ್ಗಿ

(C) ಗೋವಿಂದ ಪೈ, ತೀನಂಶ್ರೀ, ಆರ್.ಸಿ. ಹಿರೇಮಠ, ಎಂ.ಎಂ. ಕಲಬುರ್ಗಿ

(D) ಎಂ.ಎಂ. ಕಲಬುರ್ಗಿ, ಗೋವಿಂದ ಪೈ, ತೀನಂಶ್ರೀ, ಆರ್.ಸಿ. ಹಿರೇಮಠ

49. (A) ಅಶ್ವತ್ಥಾಮನ್, ಬಿರುಗಾಳಿ, ಕಾಕನಕೋಟೆ, ಮುಕುತಿ-ಮೂಗುತಿ

(B) ಬಿರುಗಾಳಿ, ಅಶ್ವತ್ಥಾಮನ್, ಮುಕುತಿ-ಮೂಗುತಿ, ಕಾಕನಕೋಟೆ

(C) ಕಾಕನಕೋಟೆ, ಬಿರುಗಾಳಿ, ಅಶ್ವತ್ಥಾಮನ್, ಮುಕುತಿ-ಮೂಗುತಿ

(D) ಅಶ್ವತ್ಥಾಮನ್, ಕಾಕನಕೋಟೆ, ಮುಕುತಿ-ಮೂಗುತಿ, ಬಿರುಗಾಳಿ

50. (A) ಶಿವದಾಸ ಗೀತಾಂಜಲಿ, ನಾಡೋಜ ಪಂಪ, ಕನ್ನಡ ಮಧ್ಯಮ ವ್ಯಾಕರಣ, ಕನ್ನಡ ನೇಮಿನಾಥ ಪುರಾಣಗಳ ಅಧ್ಯಯನ

(B) ನಾಡೋಜ ಪಂಪ, ಶಿವದಾಸ ಗೀತಾಂಜಲಿ, ಕನ್ನಡ ನೇಮಿನಾಥ ಪುರಾಣಗಳ ಅಧ್ಯಯನ, ಕನ್ನಡ ಮಧ್ಯಮ ವ್ಯಾಕರಣ

(C) ಕನ್ನಡ ನೇಮಿನಾಥ ಪುರಾಣಗಳ ಅಧ್ಯಯನ, ಕನ್ನಡ ಮಧ್ಯಮ ವ್ಯಾಕರಣ, ಶಿವದಾಸ ಗೀತಾಂಜಲಿ, ನಾಡೋಜ ಪಂಪ

(D) ನಾಡೋಜ ಪಂಪ, ಕನ್ನಡ ಮಧ್ಯಮ ವ್ಯಾಕರಣ, ಶಿವದಾಸ ಗೀತಾಂಜಲಿ, ಕನ್ನಡ ನೇಮಿನಾಥ ಪುರಾಣಗಳ ಅಧ್ಯಯನ

**Space for Rough Work**